**ಪ್ರಧಾನ ಸಿವಿಲ್ ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ ಚಿಂಚೋಳಿ**

**ಸಿ.ಸಿ. ನಂ. 237/2023**

| | | | |
|---|---|---|---|
| **ಹೆಸರು** | **:** | **ನಟರಾಜ** | **ಚಾಸಾ. 5** |
| **ತಂದೆಯ ಹೆಸರು** | **:** | **ಪುನಸಿಂಗ** | **ಪ್ರಾ.ಸಾ. 3** |
| **ವಯಸ್ಸು** | **:** | **46 ವರ್ಷ** | **ದಿನಾಂಕಃ 13-08-2025** |
| **ಉದ್ಯೋಗ** | **:** | **ಮುಖ್ಯ ಪೇದೆ** | |
| **ವಾಸಸ್ಥಳ** | **:** | **ಸುಲೇಪೇಟ** | |

**ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಸಹಾಯಕ ಸರಕಾರಿ ಅಭಿಯೋಜಕರಿಂದಃ**

2022 ರಿಂದ ಇಲ್ಲಿಯವರೆಗೆ ಸುಲೇಪೇಟ ವೃತ್ತ ಕಛೇರಿಯಲ್ಲಿ ಮುಖ್ಯ ಪೇದೆ ಆಗಿ ಕಾರ್ಯನಿರ್ವಹಿಸುತ್ತಿದ್ದೇನೆ.

ದಿನಾಂಕಃ 17-03-2023 ರಂದು ಮಧ್ಯಾಹ್ನ 2.45 ಗಂಟೆ ಸುಮಾರಿಗೆ ಚಾಸಾ-1ರವರು ಚಿಂಚೋಳಿ ಡಾಮಿನೇಷನ ಕರ್ತವ್ಯದಲ್ಲಿದ್ದಾಗ ನನಗೆ ಮತ್ತು ಚಾಸಾ-4 ಮತ್ತು 6ರವರಿಗೆ ತುಮಕುಂಟಾ ಹತ್ತಿರ ಅಕ್ರಮವಾಗಿ ಮದ್ಯ ಮಾರಾಟ ಮಾಡುತ್ತಿದ್ದಾರೆ ಎಂದು ಖಚಿತ ಭಾತ್ಮಿ ಬಂದಿದೆ ಆದ್ದರಿಂದ ದಾಳಿಗಾಗಿ ಜೊತೆಯಲ್ಲಿ ಬರಲು ಸೂಚಿಸಿದರು. ನಂತರ ಪಂಚರಾದ ಚಾಸಾ-2 ಮತ್ತು 3 ರವರನ್ನು ಕರೆಸಿ ಅವರಿಗೆ ಭಾತ್ಮಿ ಬಗ್ಗೆ ತಿಳಿಸಿ ಅವರು ಪಂಚರಾಗಲು ಒಪ್ಪಿ ಕೊಂಡ ಮೇರೆಗೆ ನಾನು, ಸಿಬ್ಬಂದಿಯಾದ ಚಾಸಾ-1, 4 ಮತ್ತು 6 ಹಾಗೂ ಪಂಚರು ಸೇರಿ ಭಾತ್ಮಿ ಸ್ಥಳಕ್ಕೆ ಮಧ್ಯಾಹ್ನ 2-30 ಗಂಟೆಗೆ ಹೋರಟು ಮಧ್ಯಾಹ್ನ 3 ಗಂಟೆ ಸುಮಾರಿಗೆ ಭಾತ್ಮಿ ಸ್ಥಳದಲ್ಲಿ ಮರೆಯಲ್ಲಿ ನಿಂತು ನೋಡಿದಾಗ ಇಬ್ಬರು ವ್ಯಕ್ತಿಗಳು ದಾಬಾದ ಮರೆಯಲ್ಲಿ ಅಕ್ರಮವಾಗಿ ಮದ್ಯ ಮಾರಾಟ ಮಾಡುತ್ತಿರುವುದು ಕಂಡು ಬಂದಿದ್ದು ಅವರ ಮೇಲೆ ಸಿಬ್ಬಂದಿಯೊಂದಿಗೆ ಪಂಚರ ಸಮಕ್ಷಮ ದಾಳಿ ಮಾಡಿ ಅವರ ಹೆಸರು ವಿಚಾರಿಸಿದಾಗ ತಮ್ಮ ಹೆಸರು ಮಲ್ಲಯ್ಯ ಮತ್ತು ಅರವಿಂದ ಎಂದು ತಿಳಿಸಿರುತ್ತಾರೆ. ಸದರಿ ವ್ಯಕ್ತಿಗಳು ಈ ದಿನ ನ್ಯಾಯಾಲಯದ ಮುಂದೆ ಇರುವ ಆರೋಪಿತರು ಆಗಿರುತ್ತಾರೆ.

ಅವರ ಹತ್ತಿರವಿದ್ದ ಮದ್ಯವನ್ನು ಪರಿಶೀಲಿಸಿದಾಗ ಅಲ್ಲಿ ಒಟ್ಟು 650 ML ಅಳತೆಯ 30 Kingfisher ಬಾಟಲಗಳು, 90 ML ಅಳತೆಯ 23 ವಿಸ್ಕಿ ಪೌಚಗಳು ಹಾಗೂ 180 ML ಅಳತೆಯ 9 ಒಟಿ ಪೌಚಗಳು ದೊರೆತಿದ್ದು ಅಲವುಗಳನ್ನು ಪ್ರತ್ಯೇಕವಾಗಿ ಸೀಲ ಮಾಡಿ ರಾಸಾಯನಿಕ ಪರೀಕ್ಷೆಗೆ ಕಳುಹಿಸಿಲು ಪ್ರತ್ಯೇಕವಾಗಿ ಸೀಲ್ ಮಾಡಿ ಸಾಯಂಕಾಲ 3.40 ರಿಂದ 4.40 ರವರೆಗೆ ಚಾಸಾ-1ರವರು ಜಪ್ತಿ ಪಂಚನಾಮೆಯನ್ನು ಜರುಗಿಸಿ ಪಂಚರ ಸಹಿಗಳನ್ನು ಪಡೆದಿದ್ದಾರೆ.

ಆರೋಪಿತರಿಗೆ ಮದ್ಯಪಾನ ಮಾರಾಟ ಮಾಡುವ ಪರವಾಗನಿಗೆ ಇದೆಯೇ ಎಂದು ಪ್ರಶ್ನಿಸಿದಾಗ ಆರೋಪಿತರು ಪರವಾನಿಗೆ ಇರುವುದಿಲ್ಲ ಎಂದು ತಿಳಿಸಿರುತ್ತಾರೆ.

ಈ ರೀತಿ ನಾನು, ಚಾಸಾ-4 ಮತ್ತು 6ರವರು ಚಾಸಾ-9ರವರಿಗೆ ಹೇಳಿಕೆಗಳನ್ನು ನೀಡಿದ್ದೇವೆ. ಈಗ ನೋಡುತ್ತಿರುವ 650 ML ಅಳತೆಯ 30 Kingfisher ಬಾಟಲಗಳು, 90 ML ಅಳತೆಯ 23 ವಿಸ್ಕಿ ಪೌಚಗಳು ಹಾಗೂ 180 ML ಅಳತೆಯ 9 ಒಟಿ ಪೌಚಗಳನ್ನು ಆರೋಪಿತರಿಂದ ಜಪ್ತಿ ಮಾಡಿದ್ದು ಅವುಗಳನ್ನು ಮು.ಮಾ-1 ರಿಂದ 3 ಎಂದು ಗುರುತಿಸಲಾಯಿತು.

**<u>ಪಾಟೀ ಸವಾಲುಃ ಆರೋಪಿತರ ಪರವಾಗಿ ಶ್ರೀ VHR ವಕೀಲರಿಂದಃ</u>**

ಬಾತ್ಮಿ ಮಧ್ಯಾಹ್ನ 2.45 ಗಂಟೆಗೆ ಬಂದಾಗ ಠಾಣೆಯಿಂದ 2.30 ಗಂಟೆಗೆ ಯಾವ ಕಾರಣಕ್ಕಾಗಿ ಹೊರಟ್ಟಿದ್ದಿರಾ ಎಂದು ಪ್ರಶ್ನಿಸಿದಾಗ ಸಾಕ್ಷಿ ಬಾತ್ಮಿ ಬಂದಾಗ ಮಧ್ಯಾಹ್ನ 2 ರಿಂದ 2.15 ಗಂಟೆಯಾಗಿತ್ತು ಎಂದು ನುಡಿಯುತ್ತಾರೆ. ಸಾಕ್ಷಿ ಮುಂದುವರೆದು ಬಾತ್ಮಿ ಬಂದ ಸಮಯ ಹೇಳಿಕೆಯಲ್ಲಿ ಕಣ್ಣು ತಪ್ಪಿನಿಂದ ಉಲ್ಲೇಖವಾಗಿದೆ ಎಂದು ನುಡಿಯುತ್ತಾರೆ. ಯಾವುದೇ ಕೃತ್ಯ ಆಗಿಲ್ಲ ಆದ್ದರಿಂದ ಸರಿಯಾದ ಸಮಯ ಉಲ್ಲೇಖ ಮಾಡಿಲ್ಲ ಎಂದರೆ ಸರಿಯಲ್ಲ.

ಚಾಸಾ-2 ಮತ್ತು 3ರವರನ್ನು ಬಾತ್ಮಿ ಮುಖಾಂತರ ಚಾಸಾ-1ರವರು ಕರೆಸಿರುತ್ತಾರೆ. ಚಾಸಾ-2 ರವರು ಚಿಂಚೋಳಿ ಪೋಲಿಸ ಠಾಣೆಯಲ್ಲಿ ಕಸ ಗೂಡಿಸುವ ಕೆಲಸ ಮಾಡುತ್ತಾರೆ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಚಾಸಾ-2 ಮತ್ತು 3ರವರು ಖಾಯಂ ಪಂಚರು ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಆ ಸಮಯಕ್ಕೆ ಚುನಾವಣೆ ಇತ್ತು ಎಂದರೆ ಸರಿ. ಪ್ರತಿಯೊಂದು ಹಳ್ಳಿಗಳಲ್ಲಿ ಇಷ್ಟು ಪ್ರಕರಣ ದಾಖಲಿಸ ಬೇಕು ಎಂದು ನಮಗೆ ಮೇಲಾಧಿಕಾರಿಗಳಿಂದ ಆದೇಶ ಇರುತ್ತದೆ ಎಂದರೆ ಸರಿಯಲ್ಲ. ಆದ್ದರಿಂದ ಅಂಕೆ ಸಂಖ್ಯೆಗೊಸ್ಕರ ಸುಳ್ಳು ಪ್ರಕರಣ ದಾಖಲಿಸಿದ್ದೇನೆ ಎಂದರೆ ಸರಿಯಲ್ಲ. ಆರೋಪಿತರಿಂದ ಹಣ ಜಪ್ತಿ ಮಾಡಿರುತ್ತಾರೆಯೇ ಎಂದು ಪ್ರಶ್ನಿಸಿದಾಗ ಸಾಕ್ಷಿ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಘಟನಾ ಸ್ದಳದ ಚಕ್ಕುಬಂದಿ ನನಗೆ ಗೊತ್ತಿಲ್ಲ. ಆರೋಪಿತರು ಯಾವುದೇ ಕೃತ್ಯ ಮಾಡದೇ ಇರುವ ಕಾರಣ ನನಗೆ ಚಕ್ಕುಬಂದಿ ಹೇಳಲು ಬರುವುದಿಲ್ಲ ಎಂದರೆ ಸರಿಯಲ್ಲ. ಈ ಪ್ರಕರಣದಲ್ಲಿ ಡಬ್ಬಿಗಳನ್ನು ಜಪ್ತಿ ಮಾಡಿಲ್ಲ ಎಂದರೆ ಸರಿಯಲ್ಲ. ಡಬ್ಬಿಗಳ ಬಣ್ಣ ಮತ್ತು ಅಳತೆ ನನ್ನ ಹೇಳಿಕೆಯಲ್ಲಿ ಉಲ್ಲೇಖವಿಲ್ಲ ಎಂದರೆ ಸರಿ. ನನ್ನ ಮುಖ್ಯವಿಚಾರಣೆಯಲ್ಲಿರುವ ಸಂಗತಿಗಳು ಸುಳ್ಳು ಎಂದರೆ ಸರಿಯಲ್ಲ. ಆರೋಪಿತರಿಗೂ ಹಾಗೂ ಈ ಪ್ರಕರಣಕ್ಕೂ ಯಾವುದೇ ರೀತಿಯಿಂದ ಸಂಬಂಧವಿಲ್ಲ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲಾ .**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)**
**ಓ.ಹೇ.ಕೇ. ಸರಿ ಇದೆ.**

**ಪ್ರಧಾನ ಪ್ರ.ದ.ನ್ಯಾ .ದಂ. ಚಿಂಚೋಳಿ**